

ಎಡದಿಂದ ಬಲಕ್ಕೆ:
1. ಧ್ಯಾನದ ಕ್ರಮ ಅರಿಯಲು ವ್ಯಾಸಂಗ ಮಾಡಬೇಕೇ? (4)
3. ಪುಂಡನಾದರೂ ಚೆಂಡಿನಾಟದಲ್ಲಿ ಅಸಾಮಾನ್ಯ ಆತ (3)
4. ವಿರಾಮವನ್ನೇ ಕೇಳದೆ ದುಡಿದದ್ದೂ ಅದ್ಭುತ ದಾಖಲೆ (3)
6. ಸಿಡಿಲಿಗೆ ತುತ್ತಾಯಿತು ಬಡವರ ಜೋಪಡಿ (4)
7. ಆರಿಸುವ ಕೆಲಸದಲ್ಲಿ ಆತುರ ಏಕೆ? (4)
9. ಆ ಕೋಲನ್ನು ಬಗ್ಗಿಸಲು ಅವನ ಶಕ್ತಿಯ ನಾಲ್ಕರ ಒಂದಂಶ ಸಾಕು (4)
11. ಜಾತಿಯಲ್ಲಿ ಭೇದ ಭಾವಕ್ಕೆ ಎಳ್ಳು-ನೀರಿನ ಮುಕ್ತಾಯ (4)
13. ರಣದಿಂದ ಬರುವ ವೇಳೆಗೆ ಸಾಲದ ಹೊರೆ (4)
15. ಭಯದಿಂದ ಮೂಡಿಬಂದ ಮಿಥ್ಯಾ ಚಿತ್ರ (4)
17. ಕರೆ ತರುವುದು ಹೇಗೆ? ಆತ ಸೃಷ್ಟಿಕರ್ತ (3)
18. ಕೊಂಚವೂ ಸಂತೃಪ್ತಿ ಇಲ್ಲ. ಹಾಗೆ ಹೇಳಲು ದಾಕ್ಷಿಣ್ಯ (3)
19. ಕಾವಲು ನಿಂತಿರುವವ ಲಲಿತ ವಿದ್ಯಾ ಪಾರಂಗತ (4)

ಮೇಲಿಂದ ಕೆಳಕ್ಕೆ:
1. ಅಡ್ಡವಾಗುವುದು ಬೇಡ. ಸುಮ್ಮನೆ ಮರೆಯಾಗು (3)
2. ಒಲವನ್ನು ಪ್ರದರ್ಶಿಸುತ್ತಿದೆ, ಎಂಥ ಅಲಂಕೃತ ಹಕ್ಕಿ! (3)
3. ಪರಿಸರವನ್ನು ಪರಿಚಯಿಸುವ ಸಂಚಾರ ಕಾರ್ಯಕ್ರಮ (3)
5. ಹೇಮಾದ್ರಿಯಲ್ಲೊಂದು ಬೃಹತ್ ಬಂಗಲೆ (3)
7. ಅತಿಯಾಗಿ ಹೋಗಿದ್ದಕ್ಕೆ ಈ ಹೀನ ಸ್ಥಿತಿ (4)
8. ಗೊತ್ತಿರಲಿ, ಇದು ತೇರಿನ ಚಕ್ರ (4)
9. ಕೋವಿ ಹಿಡಿದು ಹೆದರಿಸುತ್ತಿದ್ದವ ಈಗ ಕಾವಿ ತೊಟ್ಟಿದ್ದಾನೆ (4)
10. ಗರಡಿಯಲ್ಲಿ ಶಿಸ್ತು ತರಲು ಕಾಲಯಂತ್ರ (4)
12. ಜೊಳ್ಳುಕಾಳು ತೂರಿದ ನಂತರ ಸ್ನಾನವಾಗಲಿ (3)
14. ಚೂರ್ಣ ತುಳಿದೊಡನೆ ಪಾದವೇ ಅಡಿಮೇಲು (3)
15. ಮೂರ್ಖರ ಸಂಘವೆಂದರೆ ಭಾರೀ ಅಪಾಯ (3)
16. ಸಂತಸ ಬರಿಸಿದ್ದು ಚೈತ್ರ-ವೈಶಾಖ ಕಾಲ (3)

## 09-1-14ರ ಉತ್ತರಗಳು

ಎಡದಿಂದ ಬಲಕ್ಕೆ:
1. ಅವಕಾಶ; 3. ಅಧೀನ; 4. ಕರಿದು; 6. ತಿರುಗಾಟ; 7. ಸತತ; 9. ಪಾತಕ; 11. ಸುಜನ; 13. ತಿಲಕ; 15. ಭಲಾಭಲಾ; 17. ಗುಡಾರ; 18. ವಂದನೆ; 19. 'ತವಂಲಚ' (ಚಲವಂತ ಹಿಂದು ಮುಂದು; ಚಲ=ಛಲ).

ಮೇಲಿಂದ ಕೆಳಕ್ಕೆ:
1. ಅನತಿ; 2. ಶಕಟ; 3. ಅಚ್ಯುತ; 5. ದುರಂತ; 7. ಸಹಿಸು; 8. ತಲ್ಲೀನ; 9. ಪಾರ್ವತಿ; 10. ಕಳಂಕ; 12. ಜರಗು; 14. ಲಲನೆ; 15. ಭರತ; 16. ಲಾವಂಚ.

# ಪ್ರಶ್ನಾಂಕಣ

## 'ಗರಿಷ್ಠ ಭದ್ರತೆಯ ಹಕ್ಕಿ ಗೂಡು' ಯಾವುದು?

ಹಕ್ಕಿಗಳು ನಿರ್ಮಿಸುವ ಗೂಡುಗಳಲ್ಲಿ ಸಾವಿರಾರು ವಿಧಗಳಿವೆ. ಆದರೆ ವೈವಿಧ್ಯ ಎಷ್ಟೇ ಇದ್ದರೂ ಹಕ್ಕಿಗೂಡಿನ ಅಂತಿಮ ಉದ್ದೇಶ ಒಂದೇ: ಸುರಕ್ಷಿತ ಸಂತಾನಾಭಿವೃದ್ಧಿ. ಮೊಟ್ಟೆಗಳನ್ನು-ಮರಿಗಳನ್ನು ಬೆಚ್ಚಗಿರಿಸಿ, ಅವು ಪ್ರೌಢವಾಗುವವರೆಗೂ ಶತ್ರುಗಳ ಕಣ್ಣಿಗೆ ಬೀಳದಂತೆ, ಅವಕ್ಕೆ ಬಲಿಯಾಗದಂತೆ ಕಾಪಾಡಲು ಪ್ರತಿ ಸಂತಾನ ಕಾಲದಲ್ಲೂ ವಯಸ್ಕ ಹಕ್ಕಿಗಳು ಗೂಡು ನಿರ್ಮಿಸುತ್ತವೆ.

ಹಾಗೆ ಹಕ್ಕಿಗಳು ಕಟ್ಟುವ ಗೂಡಿನ ವಿಧಗಳಲ್ಲೆಲ್ಲ ಗರಿಷ್ಠ ಸುರಕ್ಷತೆಯ, ಸರ್ವೋತ್ತಮ ತಂತ್ರಗಾರಿಕೆಯ ಅಸದೃಶ ನಿದರ್ಶನ ಆಫ್ರಿಕದ 'ಕೇಪ್ ಪೆಂಡ್ಯುಲೈನ್ ಟಿಟ್' ಹಕ್ಕಿಯ ಗೂಡು. ಸಸ್ಯ ನಾರು, ಜೇಡನ ಬಲೆಯ ದಾರ- ಇವುಗಳನ್ನು ಜೋಡಿಸಿ, ಹೆಣೆದು, ಕಟ್ಟಿ, ನೇಯ್ದು ಆ ಪುಟ್ಟ ಹಕ್ಕಿ ನಿರ್ಮಿಸುವ ಗೂಡಿನ ಸುರಕ್ಷಾ ವ್ಯವಸ್ಥೆ ಖಗ ಜಗದಲ್ಲೇ ಅನನ್ಯ, ಅತ್ಯದ್ಭುತ. ಆಫ್ರಿಕದಲ್ಲಿ ಈ ಹಕ್ಕಿಗಳ ವಾಸ ಕ್ಷೇತ್ರದಲ್ಲಿ ಮರಿಗಳ ಪ್ರಮುಖ ಶತ್ರು ಸರ್ಪಗಳು. ಆದರೆ ಸರ್ಪವೊಂದು ಗೂಡಿನ ಬಳಿ ಬಂದರೂ, ಗೂಡನ್ನು ಹೊಕ್ಕರೂ ಮರಿಗಳ ಅಸ್ತಿತ್ವ ಗೊತ್ತೇ ಆಗದಂಥ ಮಾಯಾಮಯ ಗೂಡು ಈ ಹಕ್ಕಿಯದು.




'ಕೇಪ್ ಪೆಂಡ್ಯುಲೈನ್ ಟಿಟ್; ಹಕ್ಕಿ ಅಕೇಶಿಯಾ ವೃಕ್ಷದ ಕೊಂಬೆ-ರಂಬೆಗಳಲ್ಲಿ ಗೂಡು ಕಟ್ಟುತ್ತದೆ. ಇದರ ಗೂಡಲ್ಲಿ ಎರಡು ಕೊಠಡಿಗಳು. ಕೆಳಗಿನ ಕೋಣೆ ದೊಡ್ಡದು. ಅದಕ್ಕೆ ಸದಾ ತೆರೆದಿಟ್ಟ ಒಂದು ವಿಶಾಲ ಪ್ರವೇಶದ್ವಾರ. ಅದರ ಮೇಲ್ಭಾಗದಲ್ಲಿ ಮತ್ತೊಂದು ಭದ್ರ ಕೋಣೆ. ಅದಕ್ಕೂ ಹೊರಗಿನಿಂದಲೇ ಪ್ರತ್ಯೇಕವಾದ- 'ಕೈಬಿಟ್ಟರೆ ತಾನೇ ಮುಚ್ಚಿಕೊಳ್ಳುವ', ಹಾಗಾಗಿ ಸದಾ ಮುಚ್ಚಿದ ಬಾಗಿಲು. ಮೊಟ್ಟೆ-ಮರಿಗಳಿಗೆ ಈ ರಹಸ್ಯ ಕೊಠಡಿಯಲ್ಲಿ ನೆಲೆ.

ಗೂಡಿಗೆ ಆಹಾರ ತರುವ ತಂದೆ-ತಾಯಿ ಹಕ್ಕಿ ಮೊದಲು ಎಲ್ಲರಿಗೂ ಕಾಣುವಂತೆಯೇ ಕೆಳಗಿನ ಖಾಲಿ ಕೋಣೆ ಹೊಕ್ಕು ಹೊರಗೆ ಶತ್ರುಗಳಿಲ್ಲದ್ದನ್ನು ಖಚಿತ ಮಾಡಿಕೊಂಡು (ಚಿತ್ರ-1) ಹೊರಬಂದು ಮೇಲ್ಭಾಗದ ರಹಸ್ಯ ದ್ವಾರವನ್ನು ಕಾಲಿನಿಂದ ಜಗ್ಗಿ ತೆರೆದು (ಚಿತ್ರ-2) ಬೇಗ ಒಳ ಹೋಗುತ್ತದೆ. ಮರಿಗಳಿಗೆ ಆಹಾರ ಉಣಿಸಿದ ನಂತರ ತಲೆಯನ್ನಷ್ಟೇ ಹೊರ ಹಾಕಿ (ಚಿತ್ರ-3) ಶತ್ರುಗಳಾರೂ ಗಮನಿಸುತ್ತಿಲ್ಲ ಎಂದು ಖಾತ್ರಿಯಾದೊಡನೆ ಬೇಗ ಹೊರಬರುತ್ತದೆ. ಗೂಡಿನ ಮೇಲೇ ಕುಳಿತು ರಹಸ್ಯ ಬಾಗಿಲನ್ನು ತಲೆಯಿಂದ ಗುದ್ದಿ ಗುದ್ದಿ ಭದ್ರವಾಗಿ ಮುಚ್ಚಿ ಆಹಾರಾನ್ವೇಷಣೆಗೆ ಹಾರಿಹೋಗುತ್ತದೆ.

ಮರಿಗಳನ್ನು ಹಿಡಿದು ನುಂಗಲು ಬರುವ ಸರ್ಪಗಳು ಗೂಡಿನ ತೆರೆದ ಬಾಗಿಲಿನ ಮೂಲಕ ತಲೆ ಹಾಕುತ್ತವೆ. ಖಾಲಿ ಗೂಡೆಂದು ಭಾವಿಸಿ ದೂರ ಸಾಗುತ್ತವೆ. ಎಂಥ ವಿಸ್ಮಯದ ತಂತ್ರ!

■ ಎನ್. ವಾಸುದೇವ್